# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ**1391/2022**

### ಡಿ ಡಬ್ಲೂ-2

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ08.05.2026**

| | | |
|---|---|---|
| ಹೆಸರು | : | ವಿಜಯಶ್ರೀ ಕೆ ಕೋಂ ರಾಕೇಶ್ ಹೆಚ್ |
| ವಯಸ್ಸು | : | **40** ವರ್ಷ |
| ಉದ್ಯೋಗ | : | ಬ್ರಾಂಚ್ ಮ್ಯಾನೇಜರ್ , ಹಾನಗಲ್ ಬ್ರಾಂಚ್ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ |
| ವಿಳಾಸ | : | ಬಳ್ಳಾರಿ |

**ಮುಖ್ಯ ವಿಚಾರಣೆ :** ಆರೋಪಿ **ಪರ P.H.T., ವಕೀಲರಿಂದಃ**

ನಾನು ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ನಲ್ಲಿ ಕಳೆದ 1 ವರ್ಷದಿಂದ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ . ನ್ಯಾಯಾಲಯ ಆದೇಶದಂದೆ ಆರೋಪಿ ಸಿದ್ದೇಶ್ ಅವರಿಗೆ ಸಂಬಂದಿಸಿದ ನಮ್ಮ ಬ್ಯಾಂಕಿನ SPECIMEN CARD, ಖಾತೆ ತೆರೆಯಲು ನೀಡಿದ ಅರ್ಜಿ ಮತ್ತು ಫಾರಂ 61 ಅನ್ನು ಹಾಜರುಪಡಿಸಿರುತ್ತೇನೆ . ಸಾಕ್ಷಿ ಈಗ ನ್ಯಾಯಾಲಯಕ್ಕೆ ಆರೋಪಿಯ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಖಾತೆಗೆ ಸಂಬಂದಿಸಿದ SPECIMEN CARD, ಖಾತೆ ತೆರೆಯಲು ನೀಡಿದ ಅರ್ಜಿ ಮತ್ತು ಫಾರಂ 61 ನೋಟರಿ ಪ್ರತಿಗಳನ್ನು ಹಾಜರುಪಡಿಸಿದ್ದು , ಸದರಿ ನೋಟರಿ ಪ್ರತಿಗಳನ್ನು ಅಸಲು ಪ್ರತಿಗಳೊಂದಿಗೆ ಪರಿಶೀಲಿಸಿದ ನಂತರ , ಅವುಗಳನ್ನು ಕ್ರಮವಾಗಿ ನಿಡಿ 1 ರಿಂದ 3 ಎಂದು ಗುರುತಿಸಲಾಯಿತು. ಫಿರ್ಯಾದಿ ಪರ ವಕೀಲರು ಸದರಿ ನೋಟರಿ ಪ್ರತಿಗಳನ್ನು ಗುರುತಿಸಲು ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳುತ್ತಾರೆ . ಸದರಿ ಅಸಲು ಪ್ರತಿಗಳನ್ನು ಸಾಕ್ಷಿಗೆ ವಾಪಸ್ ನೀಡಲಾಯಿತು .

ಸಾಮಾನ್ಯವಾಗಿ ನಮ್ಮ ಬ್ಯಾಂಕಿನ ನಿಯಮಾನುಸಾರ ನಾವು ಖಾತೆದಾರರ ಖಾತೆ ತೆರೆಯುತ್ತೇವೆ . ಖಾತೆ ತೆರೆಯುವಾಗ ಖಾತೆದಾರರು ತಮ್ಮ SPECIMEN SIGNATURE ಅನ್ನು ಯಾವ ರೀತಿ

ಮಾಡುತ್ತಾರೋ ಅದೇ ರೀತಿ ನಾವು ಗುರುತಿಸುತ್ತೇವೆ. ನಿಡಿ 1 ರಿಂದ 3 ದಾಖಲೆಗಳ ಪ್ರಕಾರ ಆರೋಪಿ ಸಿದ್ದೇಶಿ ಅವರ ಸಹಿಯು ಕನ್ನಡದಲ್ಲಿ ಇರುತ್ತದೆ . ನಾವು ಒಂದು ವೇಳೆ ಚೆಕ್ ಅನ್ನು ನಗಧೀಕರಣಕ್ಕೆ ಸಲ್ಲಿಸುವ ಸಂದರ್ಭದಲ್ಲಿ ಸಹಿಯನ್ನು ಪರಿಶೀಲನೆ ಮಾಡಿ ನಂತರ ಅದನ್ನು ನಾವು ಜಾರಿಗೊಳಿಸುತ್ತೇವೆ . ನಾವು ಖಾತೆದಾರರ ಸಹಿಯಂತೆಯೇ ಅವರಿಗೆ ಸಂಬಂದಿಸಿದ ಎಲ್ಲಾ ವ್ಯವಹಾರ ಮಾಡುತ್ತೇವೆ . ನಾವು ನಮ್ಮ ಬ್ಯಾಂಕಿನ ಖಾತೆದಾರರ ಸಂಬಂದಿಸಿದ ವ್ಯವಹಾರಗಳನ್ನು ನಮೂದಿಸುತ್ತೇವೆ ಎಂದರೆ ಸಾಕ್ಷಿ ನಾವು ಈಗ CBS ಪೋರ್ ಬ್ಯಾಂಕ್ ಸಿಸ್ಟಮ್ ನಂತೆ ಮಾಡುತ್ತೇವೆ ಎಂದು ಹೇಳುತ್ತಾರೆ . ನಿಪಿ 1 ರಲ್ಲಿ ಇರುವ ಆರೋಪಿ ಸಹಿ ಮತ್ತು ನಿಡಿ 1 ರ ಸಹಿಗೂ ವ್ಯತ್ಯಾಸ ಇರುತ್ತದೆ .

ಪಾಟೀ ಸವಾಲುಃ ಫಿರ್ಯಾದಿ ಪರ **K.V.R.,** ವಕೀಲರಿಂದಃ

ನಾನು ನಿಪಿ 1 ಚೆಕ್ ನಗಧೀಕರಣಕ್ಕ ನಮ್ಮ ಬ್ಯಾಂಕಿಗೆ ಸಲ್ಲಿಸುವ ಸಂದರ್ಭದಲ್ಲಿ ನಾನು ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ನನಗೆ ನಿಪಿ 1 ಚೆಕ್ ಗೆ ಸಂಬಂದಿಸಿದ ಹಾಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಾಮಾನ್ಯಾಗಿ ಖಾತೆದಾರರು ಖಾತೆ ತೆರೆಯುವ ಸಂದರ್ಭದಲ್ಲಿ ಕನ್ನಡ ಭಾಷೆ ಅಥವಾ ಇಂಗ್ಲಿಷ್ ಭಾಷೆಯಲ್ಲಿ ಸಹಿ ಮಾಡುತ್ತಾರೆ ಎಂದರೆ ಸರಿ. ಫಿರ್ಯಾದಿಯು ನಿಪಿ 1 ಖಾತೆಯನ್ನು ಜಗಳೂರು ಸ್ಟೇಟ್ ಬ್ಯಾಂಕ್ ಖಾತೆಗೆ ಜಮೆ ಮಾಡಿರುತ್ತಾರೆ ಎಂದರೆ ಸರಿ. ನಿಪಿ 2 ದಾಖಲೆಯು ಫಿರ್ಯಾದಿ ಬ್ಯಾಂಕಿನವರು SBI, ಜಗಳೂರು ಬ್ರಾಂಚ್ ನವರು ನೀಡಿರುತ್ತಾರೆ ಎಂದರೆ ಸರಿ. ನಿಪಿ 1 ಚೆಕ್ ಯಾವ ಕಾರಣಕ್ಕೆ ಹಿಂದಿರುಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಿಪಿ 1 ಚೆಕ್ ನಲ್ಲಿ ಪಿ ಸಿದ್ದೇಶ್ ಎಂದು ಆಂಗ್ಲ ಭಾಷೆಯಲ್ಲಿ ಸಹಿ ಇರುತ್ತದೆ . ನಿಡಿ 1 ರಿಂದ 3 ದಾಖಲೆಗಳಲ್ಲಿ ಎನ್ ಸಿದ್ದೇಶಪ್ಪ ಎಂದು ಸಹಿ ಇರುತ್ತದೆ ಎಂದರೆ ಸರಿ. ನಿಪಿ 2 ದಾಖಲೆ ಪ್ರಕಾರ ಆರೋಪಿ ಸಹಿಯು ವ್ಯತ್ಯಾಸ ಇರುವುದಿಲ್ಲ ಸಾಕಷ್ಟು ಹಣ ಇಲ್ಲ ಎಂದು ವಾಪಸ್ಸಾಗಿರುತ್ತದೆ ಎಂದರೆ ಸಾಕ್ಷಿ ಸಿಸ್ಟಮ್ ಮೂಲಕ ಚೆಕ್ ಅನ್ನು ನಗಧೀಕರಣಕ್ಕೆ ಸಲ್ಲಿಸಿದಾಗ ಮೊದಲಿಗೆ ಸಾಕಷ್ಟು ಹಣ ಇಲ್ಲ ಎಂದು ವಾಪಸ್ಸಾಗುತ್ತದೆ ನಂತರ ಸಹಿ ವ್ಯತ್ಯಾಸದ ಬಗ್ಗೆ ನೋಡುತ್ತಾರೆ ಎಂದು ಹೇಳುತ್ತಾರೆ . ಒಂದು ವೇಳೆ ನಮ್ಮ ಬ್ರಾಂಚ್ ಗೆ ನಿಪಿ 1 ಚೆಕ್

ನಗಧೀಕರಣಕ್ಕೆ ಸಲ್ಲಿಸಿದರೆ ಸಾಕಷ್ಟು ಹಣ ಇಲ್ಲ ಬದಲಾಗಿ ಸಹಿಯಲ್ಲಿ ವ್ಯತ್ಯಾಸ ಇದೆ ಎಂದು ವಾಪಸ್ ಆಗುತ್ತಿತ್ತು ಎಂದರೆ ಸರಿ. ನಮ್ಮ ಬ್ಯಾಂಕಿನ ನಿಡಿ 1 ರಿಂದ 3 ದಾಖಲೆಗಳನ್ನು ಪರಿಶೀಲಿಸಿ ನಂತರ ನಿಪಿ 1 ಅನ್ನು ಸಾಕಷ್ಟು ಹಣ ವಾಪಸ್ ಇಲ್ಲ ಎಂದು ಮಾಡಿರುತ್ತಾರೆ ಎಂದರೆ ಸಾಕ್ಷಿ ಸಹಿ ವ್ಯತ್ಯಾಸ ಇರುತ್ತದೆ ಎಂದು ಹೇಳುತ್ತಾರೆ . ನಿಡಿ 1 ರಲ್ಲಿ ಆರೋಪಿಯು ಎನ್ ಸಿದ್ದೇಶ್ ಎಂದು ಬರೆದಿರುವುದು ಅವರ ಹೆಸರು ಮಾತ್ರ ಇರುತ್ತದೆ ಅವರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)**

**ಓ ಹೇ ಕೇ ಸರಿ ಇದೆ**

**Sd/-**

**ಪ್ರ.ದ.ನ್ಯಾ.ದಂ., ಜಗಳೂರು**